# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್.ಸಿ. 297/2022

| | | |
|---|---|---|
| ಸಾಕ್ಷಿದಾರರ ಹೆಸರು | ಲಿಂಗರಾಜು ಎಂ. | ಪ್ರಮಾಣ ವಚನ ಮಾಡಿದ ದಿನಾಂಕ: **08.09.2025** |
| ತಂದೆಯ/ಗಂಡನ ಹೆಸರು | ಮಹಾದೇವು | |
| ವಯಸ್ಸು | 50 ವರ್ಷ | |
| ವೃತ್ತಿ | ಮುಖ್ಯ ಪೇದೆ, ಮೈಸೂರು ದಕ್ಷಿಣ ಪೊಲೀಸ್ ಠಾಣೆ | ಪ್ರಾ.ಸಾಃ 01 |
| ವಾಸ ಸ್ಥಳ | ಮೈಸೂರು | ಚಾ.ಸಾಃ 02 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ *2016* ರಿಂದ *2019* ರವರೆಗೆ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ 17.05.2018 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಡಿ.ವೈ.ಎಸ್.ಪಿ. ಯವರು ಠಾಣಾ ವ್ಯಾಪ್ತಿಯ ರಮಾಭಾಯಿ ನಗರದಲ್ಲಿ ಮನೆ ನಂಬರ್ 401 ರಲ್ಲಿ ಅಕ್ರಮವಾಗಿ ವೇಶ್ಯವಾಟಿಕೆ ನಡೆಯುತ್ತಿರುವ ಬಗ್ಗೆ ಮಾಹಿತಿ ಇದ್ದು ತಮ್ಮ ಜೊತೆಯಲ್ಲಿ ಬರುವಂತೆ ತಿಳಿಸಿದ್ದರಿಂದ ನಾನು, ಸಬ್ ಇನ್ಸ್ ಪೆಕ್ಟರ್ ರವರಾದ ಚಾಸಾ–19 ಹಾಗೂ ಮಹಿಳಾ ಪೇದೆ ಸುನೀತಾ ಎಂ WPC No. 75 ಹಾಗೂ WPC No. 236

ಪಲ್ಲವಿ ರವರನ್ನು ಕರೆದುಕೊಂಡು ಇಲಾಖಾ ಜೀಪಾದ ಕೆಎ–55–ಜಿ–450 ಹಾಗೂ ಮತ್ತೊಂದು ಜೀಪು ಕೆಎ–55–ಜಿ–326 ರಲ್ಲಿ ಮಧ್ಯಾಹ್ನ 3.30 ರ ಸುಮಾರಿಗೆ ರಮಾಭಾಯಿ ನಗರಕ್ಕೆ ಬಂದು ಅಲ್ಲಿದ್ದ ರಮಾಭಾಯಿ ನಗರದ ನಿವಾಸಿಗಳಾದ ನಾಗರಾಜು ಎಂ. ಮತ್ತು ಸಿದ್ದಪ್ಪ ರವರುಗಳನ್ನು ಭೇಟಿ ಮಾಡಿ ನಾವು ನಡೆಸುವ ಮಹಜರ್ ಕಾಲದಲ್ಲಿ ಪಂಚರಾಗಿರಬೇಕೆಂದು ಕೇಳಿಕೊಂಡು ಅವರುಗಳು ಒಪ್ಪಿ ನಮ್ಮ ಜೊತೆ ಬಂದಿದ್ದರು. ನಂತರ ಮಧ್ಯಾಹ್ನ 3.40 ಗಂಟೆಗೆ ರಮಾಭಾಯಿ ನಗರದ ಮನೆ ನಂಬರ್ 401 ರ ಮುಂಭಾಗ ಹೋಗಿ ನೋಡಿ ಪರಿಶೀಲಿಸಲಾಗಿ ಸದರಿ ಮನೆಯೂ 20x30 ವಿಸ್ತೀರ್ಣದ ಅಳತೆಯ ಮನೆಯಾಗಿದ್ದು ಆರ್.ಸಿ.ಸಿ ಮನೆಯಾಗಿತ್ತು. ಉತ್ತರ ದಿಕ್ಕಿಗೆ ಕಬ್ಬಿಣದ ಗೇಟು ಅಳವಡಿಸಿದ್ದು ನಾವು ಗೇಟಿನಿಂದ ಬಾಗಿಲ ಬಳಿ ಹೋಗಿ ಬಾಗಿಲನ್ನು ಬಡಿದಾಗ ಸುಮಾರು ಹೊತ್ತು ಕಳೆದರು ಬಾಗಿಲು ತೆಗೆಯದ ಸಂದರ್ಭದಲ್ಲಿ ನಾವು ಬಲವಂತವಾಗಿ ಬಾಗಿಲನ್ನು ತಳ್ಳಿದಾಗ ಮನೆಯ ಒಳಗಡೆ ಹಾಲ್ ನಲ್ಲಿ ಒಬ್ಬ ಹೆಂಗಸು ನಿಂತಿದ್ದು ಅವರ ಬಗ್ಗೆ ವಿಚಾರ ಮಾಡಲಾಗಿ ಮಧು ಕೋಂ ಸುರೇಶ್, ವಾಸ ನಂಜನಗೂಡು ತಾಲ್ಲೂಕು ಎಂದು ತಿಳಿಸಿದ್ದು ಮನೆಯಲ್ಲಿ ಬೇರೆಯವರು ಇರುವ ಬಗ್ಗೆ ಮಾಹಿತಿ ಕೇಳಲಾಗಿ ಮನೆಯಲ್ಲಿ ಯಾರು ಇರುವುದಿಲ್ಲ ಎಂದು ತಿಳಿಸಿದ್ದರು ನಂತರದಲ್ಲಿ ಅದೇ ಮನೆಯಲ್ಲಿ ಪೂರ್ವ ದಿಕ್ಕಿಗೆ ಇದ್ದ ಕೊಠಡಿಯನ್ನು ಪ್ರವೇಶಿಸಿ ನೋಡಲಾಗಿ ಒಬ್ಬ ಹೆಂಗಸು ಮತ್ತು ಗಂಡಸು ಅರೆ ನಗ್ನರಾಗಿ ನಿಂತಿರುವುದು ಕಂಡು ಬಂದಿತ್ತು. ಅವರನ್ನು ವಿಚಾರಣೆ ಮಾಡಲಾಗಿ ರಂಜಿತಾ ಕೋಂ ದರ್ಶನ್, ಬೆಳವಾಡಿ

ಗ್ರಾಮ ಮತ್ತು ಗಂಡಸಿನ ಬಗ್ಗೆ ವಿಚಾರಿಸಲಾಗಿ ಹರೀಶ ಬಿನ್ ಗಣೇಶ್, ಮನೆ ನಂಬರ್ 106 ಕ್ಯಾತಮಾರನಹಳ್ಳಿ ಎಂದು ತಿಳಿಸಿದ್ದು ನಂತರದಲ್ಲಿ ಮನೆಯ ಸ್ನಾನದ ಕೊಠಡಿಯನ್ನು ಪರಿಶೀಲಿಸಲಾಗಿ ಅಲ್ಲಿ 4 ಜನ ಅವಿತು ಕುಳಿತುಕೊಂಡಿದ್ದು ಅವರುಗಳನ್ನು ವಿಚಾರಣೆ ಮಾಡಲಾಗಿ ಮಂಜುಳ ಕೋಂ ರಾಜು,ಮಲಯಾಳ ಜನಾಂಗ, ಮದೀನಾ ಪೇಟೆ ಗ್ರಾಮ, ಕೇರಳ ರಸ್ತೆ ಮಾರ್ಗ, ವಿರಾಜಪೇಟೆ, ಕೊಡಗು ಎಂದು ತಿಳಿಸಿದ್ದರು, ನಂತರ ಗಂಡಸರ ಬಗ್ಗೆ ವಿಚಾರಿಸಲಾಗಿ ರತನ್, ಮೈಸೂರಿನ ರಾಜೇಂದ್ರ ನಗರದ ನಿವಾಸಿ ಎಂದು ತಿಳಿಸಿದ್ದ ಮತ್ತೂರ್ವ ರತನ್ ಕುಮಾರ್, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಎಂದು ತಿಳಿಸಿದ್ದ, ಮತ್ತೊರ್ವ ತಂದೆಯ ಹೆಸರು ಕನ್ನಯ್ಯ  ಸ್ವಾಮಿ, ಕಾರವಾರ ಜಿಲ್ಲೆ ಎಂದು ತಿಳಿಸಿದ್ದ. ಇಲ್ಲಿಗೆ ಬಂದಿದ್ದ ಬಗ್ಗೆ ವಿಚಾರಿಸಲಾಗಿ ಮಧು ಮತ್ತು ಮಂಜುಳ ರವರು ಈ ಮನೆಯನ್ನು ಬಾಡಿಗೆ ಪಡೆದು ಅಕ್ರಮವಾಗಿ ವೇಶ್ಯವಾಟಿಕೆ ನಡೆಸುತ್ತಿದ್ದು ಈ ಸಂಬಂಧ ನಾವು ಇಲ್ಲಿಗೆ ಬಂದಿರುತ್ತೇವೆ ಎಂದು ತಿಳಿಸಿದ್ದರು. ನಂತರ ಕೊಠಡಿಗಳನ್ನು ಪರಿಶೀಲಿಸಲಾಗಿ ಚಾಪೆ ಮತ್ತು ದಿಂಬು ಕೆಳಗಡೆ ವಿವಿಧ ಕಂಪನಿಯ 5 ಕಾಂಡೋಮ್ ಗಳು ಮತ್ತು ವಿವಿಧ ಕಂಪನಿಯ 9 ಮೊಬೈಲ್ ಫೋನ್ ಗಳು ಮತ್ತು ಅಲ್ಲಿ ಸುಮಾರು 20,145/- ರೂಪಾಯಿಗಳು ಸಿಕ್ಕಿರುತ್ತವೆ. ಅವುಗಳನ್ನು ಮುಂದಿನ ಕ್ರಮಕ್ಕಾಗಿ ಡಿ.ವೈ.ಎಸ್.ಪಿ. ರವರ ಸಮ್ಮುಖದಲ್ಲಿ ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡಿದ್ದೆವು. ಮತ್ತು ಈ ಬಗ್ಗೆ ಮಹಜರ್ ಕ್ರಮ ಜರುಗಿಸಿತ್ತು. ನಾನು ಸದರಿ ಮಹಜರ್ ಗೆ ಸಹಿ ಮಾಡಿದ್ದೆನು. ಸಾಕ್ಷಿದಾರರಿಗೆ  ಮಹಜರ್ ಅನ್ನು

ತೋರಿಸಲಾಯಿತು ಸಾಕ್ಷಿದಾರರು ಮಹಜರ್ ನೋಡಿ ಗುರುತಿಸಿದ್ದು ಮಹಜರ್ ಅನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಆ ದಿನ ಮನೆಯಲ್ಲಿ ನೋಡಿದ್ದ ಮತ್ತು ಅಮಾನತ್ತು ಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು 2,000/- ರೂ ಮುಖಬೆಲೆಯ 8 ನೋಟುಗಳು ಹಾಗು 500/- ರೂ ಮುಖಬೆಲೆಯ 6 ನೋಟುಗಳು, 200/-ರೂ ಮುಖಬೆಲೆಯ 2 ನೋಟುಗಳು, 100/- ರೂ ಮುಖಬೆಲೆಯ 7 ನೋಟುಗಳು, 20/- ರೂ ಮುಖಬೆಲೆಯ 1 ನೋಟು, 10/- ರೂ ಮುಖಬೆಲೆಯ 2 ನೋಟುಗಳು ಮತ್ತು 5/- ರೂ ಮುಖಬೆಲೆಯ 1 ನೋಟು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಎಂ.ಒ-1 ಎಂದು ಗುರುತಿಸಲಾಯಿತು. ವಿವಿಧ ಕಂಪನಿಯ 5 ಕಾಂಡೋಮ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಎಂ.ಒ-2 ಎಂದು ಗುರುತಿಸಲಾಯಿತು. ಒಂದು ಒನ್ ಪ್ಲಸ್ ಮೊಬೈಲ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ-3 ಎಂದು ಗುರುತಿಸಲಾಯಿತು, ಒಂದು ನೊಕಿಯಾ ಬೇಸಿಕ್ ಸೆಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ-4 ಎಂದು ಗುರುತಿಸಲಾಯಿತು. ಎರಡು ಸ್ಯಾಮ್ ಸಂಗ್ ಮೊಬೈಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂ.ಒ-5 ಮತ್ತು 6 ಎಂದು ಗುರುತಿಸಲಾಯಿತು. ಒಂದು ITELL ಕಂಪನಿಯ ಮೊಬೈಲ್ ನೋಡಿ ಗುರುತಿಸಿದ್ದು ಅದನ್ನು ಎಂ.ಒ-7 ಎಂದು ಗುರುತಿಸಲಾಯಿತು. ಐಫೋನ್ ಮೊಬೈಲ್

ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿವೇದನೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಆ ದಿನ ನೋಡಿದ್ದ ಇಬ್ಬರು ಹೆಣ್ಣು ಮಕ್ಕಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶವನ್ನು ಕೋರಿದ್ದರಿಂದ ಕಾಲವಕಾಶವನ್ನು ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.